

# ಸರಸವಾಣಿಯ ಗಿಳಿಗಳು

ಮಾಗಿಷ್ಮತಿ ನಗರದಲ್ಲಿ ಗಿಳಿಗಳು ಮಾತನಾಡುವ ಮನೆ ಯಾವುದೆಂದು ಯಾರನ್ನು ಕೇಳಿದರೂ ಚಟ್ಟೆಂದು ದಾರಿ ಹೇಳುವರು. ಆ ಮನೆಯ ಗಿಳಿಗಳು ಅಷ್ಟು ಪ್ರಸಿದ್ಧ. ಸುತ್ತಮುತ್ತ ಸುಂದರವಾದ ತೆಂಗಿನ ತೋಪುಗಳು ತಣ್ಣನೆಯ ತಟಾಕಗಳು ತುಂಬಿರುವ ಆ ನಗರದ ಬೀದಿಯೊಂದರಲ್ಲಿ ಮಂಡನ ಮಿಶ್ರನ ಮಾಳಿಗೆ ಮನೆ ಇತ್ತು. ಆ ಮನೆಯ ಅಂಗಳದ ಸೂರಿನಲ್ಲಿ ತೂಗಾಡುವ ಪಂಜರಗಳಿಂದ ಗಿಳಿಗಳ ಮಾತು ಸದಾ ಕೇಳುತ್ತಿರುವುದು. ಅವನ್ನು ಸಾಧಾರಣವಾದ ಪಾಮರ ಗಿಳಿಗಳೆಂದು ಯಾರೂ ಅಂದುಕೊಳ್ಳಬೇಡಿ. ಅವು ಮಾತನಾಡುವ ಗಿಳಿಗಳು. ಬರೀ ಕಾಡುಹರಟೆ ಹೊಡೆವ ಗಿಳಿಗಳಲ್ಲ. ಅವು ಬುದ್ಧಿವಂತಿಕೆಯಿಂದ ವೇದಾಂತದ ತರ್ಕಗಳನ್ನು ಮಾಡುವ ಗಿಳಿಗಳು. ಆ ಮನೆಯ ಯಜಮಾನಿ ಸರಸವಾಣಿ ತನ್ನ ಮಧುರ ಕಂಠದಿಂದ ಅವಕ್ಕೆ ಪೂರ್ವ ಮೀಮಾಂಸೆಯಿಂದ ಕಲಿಸಿಕೊಟ್ಟಿರುವ ಮಂತ್ರ, ಶ್ಲೋಕಗಳನ್ನು ಅವಳೊಂದಿಗೆ ಪೈಪೋಟಿಯಿಂದ ಹೇಳುವವು.

ಮಂಡನ ಮಿಶ್ರ ಇಲ್ಲದಿರುವ ಸಮಯದಲ್ಲಿ ಸರಸವಾಣಿಗೆ ಆ ಮಾತನಾಡುವ ಗಿಳಿಗಳದೇ ಸಾಂಗತ್ಯ. ಗಿಳಿಗಳು ಹೇಳಿದ್ದನ್ನು ಹಾಗೆಯೇ ಪುನರುಚ್ಚಾರ ಮಾಡುವವು ಎಂಬುದೇ ಕಾಲಕಾಲದಿಂದ ಕತೆಗಳಲ್ಲಿ ಬಂದ ನಂಬಿಕೆ. ಆದರೆ, ಇವಳ ಗಿಳಿಗಳೋ ಒಂದು ಹೆಜ್ಜೆ ಮುಂದೆ ಹೋಗಿ ಇವಳು ಹೇಳದ್ದನ್ನೂ ಊಹಿಸಿ ಹೇಳುವಂತಹವು. ಅವಳೊಂದಿಗೆ ಅಂತರಂಗದಲ್ಲಿ ಸಂಭಾಷಣೆ ಮಾಡುವಂತಹವು. ಸಲಿಗೆಯಿಂದ ಪ್ರಶ್ನೆಗಳನ್ನು ಕೇಳುವಂತಹವು. ಅವಳು ಬೇಸರದಿಂದ ಕುಳಿತಿರುವಾಗ ವೇದ, ಕಾವ್ಯಗಳಿಂದ ಏನನ್ನಾದರೂ ತೆಗೆದು ಹೇಳಿ ಅವಳನ್ನು ಹುರಿದುಂಬಿಸುವಂತಹವು.

ಬುದ್ಧಿಯಿಲ್ಲದ ಅಲ್ಪ ಪ್ರಾಣಿಗಳಾದ ಗಿಳಿಗಳಿಂದ ನಿಜವಾಗಲೂ ಇವೆಲ್ಲ ಸಾಧ್ಯವೇ ಎಂದು ಸರಸವಾಣಿಯೇ ಅನೇಕ ಸಮಯಗಳಲ್ಲಿ ನಂಬದೇ ಆಶ್ಚರ್ಯ ಚಕಿತಳಾಗಿರುವಳು. ಬಹುಶಃ ಈ ಗಿಳಿಗಳು ಮಾತನಾಡುವುದು ತಾನು ಕಲ್ಪಿಸಿಕೊಂಡ ಭ್ರಮೆ ಇರಬಹುದೇ? ಎಂಬ ಯೋಚನೆಗೆ ಅವಳನ್ನು ತಳ್ಳಿದ್ದುಂಟು. ಅವಳ ಅಂತರಂಗದ ಮಾತುಗಳೇ ಈ ಹಕ್ಕಿಗಳ ಬಾಯಿಂದ ಮಾತುಗಳಾಗಿ ಹೊರಹೊಮ್ಮುತ್ತಿವೆಯೋ? ಹಾಗಿದ್ದರೆ ಆ ಗಿಳಿಗಳು ಅವಳೊಂದಿಗೆ ಅಂತರಂಗವಾಗಿ ಸಂಭಾಷಿಸುವುದು ಬರಿ ಮಾಯೆಯೇ? ಛೇ, ಛೇ... ಹಾಗಲ್ಲಾ ಇರಲಾರದು. ಈ ಮಾಯಾವಾದ, ಈಗ ಹೊಸದಾಗಿ ವೇದಾಂತಿಗಳು ಎಂದು ತಮ್ಮನ್ನು ಕರೆದುಕೊಳ್ಳುವ ಉತ್ತರ ಮೀಮಾಂಸೆಯವರೊಂದಿಗೇ ಇರಲಿ ಬಿಡಿ. ಅವಳಿಗೆ ಅದು ಬೇಕಿಲ್ಲ. ಅವಳು ಪೂರ್ವ